C.R.P.67

Form No.4 (Civil)
Deposition Sheets
(R.P.No.57)

2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ.

ಎಸ್.ಸಿ. ಸಂಖ್ಯೆಃ**113/2022**

ಪ್ರಾಸಾ. **03** ಚಾಸಾ. **03**

ಸಾಕ್ಷಿದಾರರ ಹೆಸರು	ನಂಜುಂಡಸ್ವಾಮಿ
ತಂದೆಯ ಹೆಸರು	ಶ್ರೀಕಂಠಸ್ವಾಮಿ
ವಯಸ್ಸು	**29** ವರ್ಷಗಳು
ಉದ್ಯೋಗ	ಖಾಸಗಿ ಕೆಲಸ
ವಾಸ	ಬೆಂಗಳೂರು

ಸಾಕ್ಷಿಯನ್ನು ದಿನಾಂಕಃ**27.02.2026** ರಂದು ಕರೆಯಿಸಿ ಪ್ರಮಾಣ ವಚನ
ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-**1** ಮತ್ತು ಚಾಸಾ-**2** ನನ್ನ ತಂದೆ ತಾಯಿ, ನಮ್ಮ ತಂದೆ ತಾಯಿಗೆ ನಾವು ಇಬ್ಬರು ಮಕ್ಕಳು ಅಂದರೆ ನಾನು ಮತ್ತು ನನ್ನ ತಂಗಿ ಸಂಧ್ಯಾ. ನನ್ನ ತಂಗಿಯ ಮದುವೆಯನ್ನು **1**ನೇ ಆರೋಪಿಯೊಂದಿಗೆ ಮಾಡಿದ್ದೆವು. **2**ನೇ ಆರೋಪಿ **1**ನೇ ಆರೋಪಿಯ ತಂದೆ. **1**ನೇ ಆರೋಪಿಯ ಚಿಕ್ಕಪ್ಪ ಹಾಗೂ **2**ನೇ ಆರೋಪಿ ನಮ್ಮ ಮನೆಗೆ ಸಂಬಂಧ ಕೇಳಿ ಬಂದಿದ್ದರು. ಚಾಸಾ-**6** ರಿಂದ ಚಾಸಾ-**9** ನಮ್ಮ ಸಂಬಂಧಿಕರು. ಚಾಸಾ-**10** ರಿಂದ ಚಾಸಾ-**12** ನಮ್ಮ ಊರಿನ ಹಿರಿಯರು.

2. **1**ನೇ ಆರೋಪಿಯ ಜೊತೆ ನನ್ನ ತಂಗಿಯ ಮದುವೆಯ ಸಂಬಂಧ ಬಂದಾಗ ನಾವು ಈಗಲೇ ಮದುವೆ ಬೇಡ ಎಂದು ಹೇಳಿದೆವು. ಹಾಗೇನಿಲ್ಲ ಮದುವೆ ಮಾಡಿಕೊಡಿ ಎಂದು

ಕೇಳಿದರು. ಆದರೆ ನಮಗೆ ಆರ್ಥಿಕ ಸಂಕಷ್ಟ ಇದ್ದ ಕಾರಣ ಅಂದರೆ ಆಗ ನಾವು ಬೆಂಗಳೂರಿನಿಂದ ಬಂದು ಮನೆ ತೆಗೆದುಕೊಂಡಿದ್ದರಿಂದ ಆರ್ಥಿಕವಾಗಿ ಸಮಸ್ಯೆ ಇದ್ದಿದ್ದರಿಂದ ನಾವು ಮದುವೆ ಮಾಡಲು ಎಂದು ಹೇಳಿದೆವು. ಆದರೆ ಮದುವೆ ಮಾಡಿಕೊಡಿ ಎಂದು ಹೇಳಿದರು. 1ನೇ ಆರೋಪಿ ಕಡೆಯವರು ಒಂದೂವರೆ ಲಕ್ಷ ವರದಕ್ಷಿಣೆ ಕೇಳಿದರು. ಅದಕ್ಕೆ ಅಷ್ಟು ದುಡ್ಡು ಕೊಡಲು ಆಗುವುದಿಲ್ಲ 80 ಸಾವಿರ ಹಣ ಕ್ಯಾಷ್ ಹಾಗೂ ಒಂದು ಉಂಗುರ ಕೊಡಲು ಒಪ್ಪಿದೆವು. ಮಾತುಕತೆ ಆದಾಗ ನಾನು ಇರಲಿಲ್ಲ. ಮಾತುಕತೆ ಸಮಯದಲ್ಲಿ ನನ್ನ ತಂದೆ, ನನ್ನ ಮಾವ/ ಚಾಸಾ-6, ಮತ್ತು ನಮ್ಮ ಊರಿನ ಹಿರಿಯರು ಇದ್ದರು. ನಾವು ಸಹ ಆರೋಪಿಯ ಮನೆಗೆ ಹೋಗಿ ನೋಡಿಕೊಂಡು ಬಂದು ಪರಸ್ಪರ ಒಪ್ಪಿ ಮದುವೆ ಮಾಡಿದೆವು. ಮದುವೆ ಕೆ.ಎಂ. ದೊಡ್ಡಿಯಲ್ಲಿ ಮಾಡಬೇಕು ಎಂದು ನಿರ್ಧರಿಸಿದೆವು. ಆದರೆ ಆ ಸಂದರ್ಭದಲ್ಲಿ ಕರೋನಾ ಜಾಸ್ತಿ ಯಾಗಿದ್ದ ಕಾರಣ ಆರೋಪಿತರ ಮನೆಯಲ್ಲೇ ನನ್ನ ತಂಗಿ ಮದುವೆ 1ನೇ ಆರೋಪಿಯ ಜೊತೆ ಆಯಿತು. ಮದುವೆಯ ಮೊದಲು ಮಾತುಕತೆಯಂತೆ ನನ್ನ ತಂದೆ ಅವರ ಮನೆಗೆ ಹೋಗಿ ಹಣ ಕೊಟ್ಟು ಬಂದಿರುತ್ತಾರೆ.

3. ಮದುವೆಯಾದ ನಂತರ ಶಾಸ್ತ್ರದ ಸಲುವಾಗಿ ಸುಮಾರು 15 ದಿನ ನನ್ನ ತಂಗಿ ನಮ್ಮ ಮನೆಯಲ್ಲೇ ಇದ್ದಳು, 1ನೇ ಆರೋಪಿ ಅವರ ಮನೆಯಲ್ಲಿ ಇದ್ದನು. ಶಾಸ್ತ್ರ ಆದ ನಂತರ ನನ್ನ ತಂಗಿ ಹಾಗೂ 1ನೇ ಆರೋಪಿ ಅವರ ಊರಿಗೆ ಹೋದರು. 1ನೇ ಆರೋಪಿಯ ಮನೆಯಲ್ಲಿ ಅವರ ತಂದೆ ತಾಯಿ ವಾಸವಿದ್ದರು. ಅವರೊಂದಿಗೆ ನನ್ನ ತಂಗಿಯಾ ಸಹ ವಾಸವಿದ್ದಳು. ಆ ರೀತಿ ಹೋದ ನಂತರ ಸುಮಾರು 4-5 ತಿಂಗಳು ಚೆನ್ನಾಗಿ ಇದ್ದರು.

4. ಆ ರೀತಿ 4-5 ತಿಂಗಳಾದ ನಂತರ 1ನೇ ಆರೋಪಿ ನನ್ನ ತಾಯಿಯ ಬಳಿ ಮದುವೆಗೆ ಸಾಲವಾಗಿದೆ ಹಣ ಕೊಡಿ ಎಂದು ಕೇಳಿದರು. ಸದರಿ ವಿಚಾರ ನನ್ನ ತಾಯಿ ನನ್ನ ಬಳಿ ಹಣ ಕೇಳುತ್ತಿದ್ದಾರೆ ಎಂದು ಹೇಳಿದರು. ಆಗ ನಾನು ಅಷ್ಟೊಂದು ಆಗುವುದಿಲ್ಲ, 20 ಸಾವಿರ ಆಗುತ್ತೆ ಎಂದು ನಾನು 20 ಸಾವಿರ ರೂಗಳನ್ನು ಶಿವರಾಜು ರವರಿಗೆ ಫೋನ್ ಪೇ ಮುಖಾಂತರ ಕಳುಹಿಸಿದೆ. ಶಿವರಾಜು ರವರ ಫೋನ್ ನಂಬರ್ 1ನೇ ಆರೋಪಿಗೆ ಕಳುಹಿಸಿದ್ದರು. ನನ್ನ ಮೊಬೈಲ್ ನಂಬರ್ 7892179249 ಆಗಿರುತ್ತದೆ. ನಾನು 20 ಸಾವಿರ ಹಣ ಕಳುಹಿಸಿದ್ದ ಫೋನ್ ನಂಬರ್ ನೆನಪಿಲ್ಲ.

5. ಆ ರೀತಿ **20** ಸಾವಿರ ಹಣ ಕಳುಹಿಸಿದ **4-5** ತಿಂಗಳವರೆಗೆ ಯಾವುದೇ ಮಾತುಕತೆ ನಡೆದಿರುವುದಿಲ್ಲ. ಆದಾದ ನಂತರ **1** ನೇ ಆರೋಪಿ ಪುನಃ ಬಂದು ನನ್ನ ತಾಯಿಯ ಬಳಿ ಸಾಲವಾಗಿದೆ ಎಂದು ಹಣ ಕೇಳಿದರು. ಸದರಿ ವಿಚಾರವನ್ನು ನನಗೆ ನನ್ನ ತಾಯಿ ತಿಳಿಸಿದರು. ಆಗ ನಾನು ನನ್ನ ಬಳಿ ಯಾವುದೇ ಹಣ ಇಲ್ಲ ಎಂದು ಹೇಳಿದೆ.

6. ನಂತರ ನಾನು ನನ್ನ ತಂಗಿ ಸಂಧ್ಯಾ ಜೊತೆ ಮಾತನಾಡಿದೆ. ಆಕೆಗೆ ಪದೇಪದೇ ಈ ರೀತಿ ಹಣ ಕೇಳಿದರೆ ಹೇಗೆ ಎಂದು ಹೇಳಿದೆ. ಆಗ ನನ್ನ ತಂಗಿ ಸಂಧ್ಯಾ ಎಮರ್ಜೆನ್ಸಿ ಇದೆ ಎಂದು ಹೇಳಿದಳು. ಆದಾದ **3-4** ತಿಂಗಳ ನಂತರ ನನ್ನ ತಾಯಿಗೆ ನಾನು **30** ಸಾವಿರ ನೀಡಿದೆ. ನನ್ನ ತಾಯಿ **30** ಸಾವಿರ ಹಣವನ್ನು ನನ್ನ ತಂಗಿಗೆ ಕೊಟ್ಟೆ ಎಂದು ಹೇಳಿದರು. ಪುನಃ ಆರೋಪಿತರು ನನ್ನ ತಾಯಿಯ ಬಳಿ ಬಂದು ಪುನಃ ಹಣ ಕೇಳಿದಾಗ ನಾನು **1** ನೇ ಆರೋಪಿಯ ಚಿಕ್ಕಪ್ಪನ ಬಳಿ ಮಾತನಾಡಿದೆ. ಅವರ ಚಿಕ್ಕಪ್ಪನ ಹೆಸರು ಮರೆತುಹೋಗಿರುತ್ತದೆ. ಆಗ **1** ನೇ ಆರೋಪಿಯ ಚಿಕ್ಕಪ್ಪ ಹಣ ಕೊಡಬೇಡಿ ಎಂದು ಹೇಳಿದರು. ಹಣದ ವಿಚಾರವಾಗಿ ಆರೋಪಿಯ ಮನೆಯಲ್ಲಿ ಜಗಳವಾಗಿದೆ ಎಂದು ನನ್ನ ತಂಗಿ ನನ್ನ ಬಳಿ ಹೇಳಿದಳು.

7. ಆದಾದ ನಂತರ ಪುನಃ **1** ನೇ ಆರೋಪಿ ನನ್ನ ತಾಯಿಯ ಬಳಿ ಬಂದು ಹಣ ಕೇಳಿದಾಗ ನನ್ನ ತಾಯಿ ನನ್ನ ಹತ್ತಿರ ಹಣವಿಲ್ಲ ನಮ್ಮ ಹುಡುಗನ ಹತ್ತಿರವೂ ಹಣ ಇಲ್ಲ ಎಂದು ಹೇಳಿ ಅವರ ಸರವನ್ನು **1** ನೇ ಆರೋಪಿಯ ಕೈಗೆ ಕೊಟ್ಟರು. ಆ ರೀತಿ ನನ್ನ ತಾಯಿ **1** ನೇ ಆರೋಪಿಯ ಕೈಗೆ ಸರ ಕೊಟ್ಟಿದ್ದರೂ ಎನ್ನುವ ವಿಚಾರ ಕೊನೆಯದಾಗಿ ನನ್ನ ತಂಗಿಯ ಸಾವಾದ ನಂತರ ನನಗೆ ಗೊತ್ತಾಗಿರುತ್ತದೆ.

8. **1** ನೇ ಆರೋಪಿ ನನ್ನ ತಾಯಿಯ ಬಳಿ ಒಟ್ಟು ಐದು ಬಾರಿ ಹಣ ಕೇಳಿದ್ದರು. ನಾನು ನನ್ನ ತಾಯಿಗೆ ಮೊದಲು **20** ಸಾವಿರ, ನಂತರ **30** ಸಾವಿರ ಕೊಟ್ಟಿದ್ದೆ. ಇಷ್ಟೆಲ್ಲಾ ನೀವು ಮಾಡಿದರೆ ನಾನು **1** ನೇ ಆರೋಪಿಯನ್ನು ಬಿಟ್ಟು ಬಿಡುತ್ತೇನೆ ಎಂದು ಹೇಳಿದಳು. ಆಗ ನಾನು **1** ನೇ ಆರೋಪಿಯ ಚಿಕ್ಕಪ್ಪನ ಜೊತೆ ಮಾತನಾಡಿದೆ, ಆಗ ಅವರು ನಿಮ್ಮ ಹುಡುಗಿ ನಮ್ಮ ಹುಡುಗಿಯೇ ಎಂದು ಹೇಳಿ ಅವರ ಚಿಕ್ಕಪ್ಪ ಹೋಗಿ ಆರೋಪಿತರ ಜೊತೆ ಜಗಳವಾಡಿದರು. ಆದ್ದರಿಂದ **1** ನೇ ಆರೋಪಿ ನನ್ನ ತಂಗಿಯ ಬಳಿ ಜಗಳ ಮಾಡಿ, ನಿನ್ನನ್ನು

ಕೊಚ್ಚು ಹಾಕಿದರೂ ಕೇಳುವವರು ಯಾರು ಇಲ್ಲ ಎಂದು ಹೇಳಿದ. ಈ ವಿಚಾರವನ್ನು ನನ್ನ ತಂಗಿ ನನಗೆ ಕರೆ ಮಾಡಿ ಹೇಳಿದಳು.

9. ಪೊಲೀಸರು **1** ನೇ ಆರೋಪಿಯ ಚಿಕ್ಕಪ್ಪನ ಬಗ್ಗೆ ಹೇಳಿರುವ ಹೇಳಿಕೆಯನ್ನು ಬಿಟ್ಟು ಬಿಟ್ಟಿರುತ್ತಾರೆ. ನನ್ನ ತಂಗಿ ಗಾರ್ಮೆಂಟ್ಸ್ ಅಥವಾ ಎಲ್ಲೋ ಆರೋಪಿಯ ಊರಿನ ಕಡೆ ಕೆಲಸ ಮಾಡುತ್ತಿದ್ದಳು ಆದರೆ ಎಲ್ಲಿ ಕೆಲಸ ಮಾಡುತ್ತಿದ್ದಳು ಗೊತ್ತಿಲ್ಲ.

10. ಒಂದು ವರ್ಷ ಅಂದರೆ **2020** ನೇ ಸಾಲಿನಲ್ಲಿ ಯುಗಾದಿ ಹಬ್ಬದ ಸಂದರ್ಭದಲ್ಲಿ ನಾನು **1** ನೇ ಆರೋಪಿಯ ಚಿಕ್ಕಪ್ಪನ ಜೊತೆ ಮಾತನಾಡಿದೆ. ಅಂದರೆ ಓದುವ ಹುಡುಗಿಗೆ ಯಾಕೆ ಗಾರ್ಮೆಂಟ್ಸ್ ಗೆ ಕಳುಹಿಸುತ್ತಿದ್ದೀರಿ ಎಂದು ಕೇಳಿದೆ, ಆಗ ಕೆಲಸ ಬಿಡಿಸಿದ್ದರು. ನಂತರ ಕಂಪ್ಯೂಟರ್ ಕ್ಲಾಸಿಗೆ ಕೆ.ಎಂ. ದೊಡ್ಡಿಯಲ್ಲಿ ಆರೇಪಿಯೇ ನನ್ನ ತಂಗಿಯನ್ನು ಸೇರಿಸಿದ್ದರು. ನನ್ನ ತಂಗಿ ಆರೋಪಿಯ ಊರಾದ ಹಾಗಲಹಳ್ಳಿಯಿಂದಲೇ ಕಂಪ್ಯೂಟರ್ ಕ್ಲಾಸಿಗೆ ಹೋಗಿ ಬರುತ್ತಿದ್ದಳು. ಆ ಸಂದರ್ಭದಲ್ಲಿ ನಾನು ಮಂತ್ರಾಲಯಕ್ಕೆ ಹೋಗಿದ್ದೆ.

11. 2021 ನೇ ಸಾಲಿನಲ್ಲಿ ಒಂದು ದಿನ **27** ನೇ ತಾರೀಖು ನನ್ನ ತಂಗಿ ನನ್ನ ಬಳಿ ಫೋನಿನಲ್ಲಿ ಅಳುತ್ತಾ ಮಾತನಾಡಿದಳು. ನನ್ನ ತಂಗಿ ಆರೋಪಿಯ ಮನೆಯಲ್ಲಿರಲು ಆಗುತ್ತಿಲ್ಲ, ಪುನಃ ದುಡ್ಡು ಕೊಡಿ ಎಂದು ಹಿಂಸೆ ಮಾಡುತ್ತಿದ್ದಾರೆ ಎಂದು ಹೇಳಿದಳು. ಆಗ ನಾನು ನನ್ನ ತಂದೆಗೆ ಫೋನ್ ಮಾಡಿ ನನ್ನ ತಂಗಿಯನ್ನು ನಮ್ಮ ಊರಿಗೆ ಕರೆದುಕೊಂಡು ಬಾ ಎಂದು ಹೇಳಿದೆ. ಆಗ ನನ್ನ ತಂದೆ ನನ್ನ ತಂಗಿಯನ್ನು ಊರಿಗೆ ಕರೆದುಕೊಂಡು ಬಂದರು. ನಾನು ಫೋನಿನಲ್ಲಿ ನನ್ನ ತಂದಗೆ ಊರಿನ ಹಿರಿಯರನ್ನು ಕರೆಯಿಸಿ ಮಾತನಾಡಿ ಎಂದು ಹೇಳಿದೆ.

12. ಒಂದು ವಾರ ಆದ ನಂತರ **1** ನೇ ಆರೋಪಿ ನನ್ನ ತಂಗಿಯ ಕಂಪ್ಯೂಟರ್ ಸೆಂಟರ್ ಬಳಿ ಹೋಗಿ ನನ್ನ ತಂಗಿಯನ್ನು ಮದುವೆ ಅಥವಾ ಯಾವುದೋ ಒಂದು ಕಾರ್ಯ ಇದೆ ಬಾ ಎಂದು ಬೈಕಿನಲ್ಲಿ ಕೂರಿಸಿಕೊಂಡು ಊರೆಲ್ಲಾ ಸುತ್ತಾಡಿಸಿ, ಅರ್ಧ ದಾರಿಯಲ್ಲೇ ಬೈಕ್ ಕೆಟ್ಟು ಹೋಗಿದೆ ಎಂದು ಕಂಪ್ಯೂಟರ್ ಸೆಂಟರ್ ನಲ್ಲಿ ಬಿಟ್ಟು ಹೋಗಿದ್ದರು. ಆ

ವಿಚಾರವನ್ನು ನನ್ನ ತಂಗಿ ನನಗೆ ಕರೆ ಮಾಡಿ ಹೇಳಿದಳು. ನನ್ನ ತಂಗಿಯ ಮೊಬೈಲ್ ನಂಬರ್ ನನಗೆ ನೆನಪಿಲ್ಲ, ಆದರೆ ನನ್ನ ತಂಗಿಯ ಮೊಬೈಲನ್ನು ಪೊಲೀಸರಿಗೆ ನೀಡಿರುತ್ತೇನೆ.

13. ಮಾರನೇ ದಿನ ನನ್ನ ತಂಗಿ ಕಂಪ್ಯೂಟರ್ ಕ್ಲಾಸಿಗೆ ಹೋಗಿದ್ದಳು. ನಾನು ಆ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ತಂಗಿ ಬೆಳಿಗ್ಗೆ **10.00** ಗಂಟೆಗೆ ಹೋಗಿ ಮಧ್ಯಾಹ್ನ **2.00** ಗಂಟೆಗೆ ವಾಪಸ್ಸು ಬರುತ್ತಿದ್ದಳು ಎಂದು ನನ್ನ ತಂದೆ ನನಗೆ ಹೇಳಿದ್ದರು. ಆ ದಿನ ನನ್ನ ತಂಗಿ **2.00** ಗಂಟೆಗೆ ವಾಪಸ್ಸು ಮನೆಗೆ ಬಂದಿಲ್ಲ ಎಂದು ಸಂಜೆ **7.00** ಗಂಟೆಗೆ ನನ್ನ ತಂದೆ ನನಗೆ ಕರೆ ಮಾಡಿ ಹೇಳಿದರು. ನನ್ನ ತಂದೆ ಊರಿನಲ್ಲಿ ನನ್ನ ತಂಗಿಯನ್ನು ಹುಡುಕಾಡಿರುವುದಾಗಿ ಹೇಳಿದರು.

14. ನನ್ನ ತಂಗಿ ಆಕೆಯ ಸ್ನೇಹಿತರ ಫೋನ್ ನಂಬರ್ ನನಗೆ ಕೊಟ್ಟಿದ್ದಳು, ಆಗ ನಾನು ನನ್ನ ತಂಗಿಯ ಸ್ನೇಹಿತರಿಗೆ ಕರೆ ಮಾಡಿ ನನ್ನ ತಂಗಿಯ ಬಗ್ಗೆ ವಿಚಾರಿಸಿದೆ, ಆಗ ನನ್ನ ತಂಗಿ ಕಂಪ್ಯೂಟರ್ ಕ್ಲಾಸಿಗೆ ಬಂದಿಲ್ಲ ಎಂದು ಹೇಳಿದರು. ನಾನು ಆ ದಿನ **1** ಗಂಟೆಗೆ ಬೆಂಗಳೂರಿನಿಂದ ಊರಿಗೆ ಬಂದೆ. ನಾನು ಬರುವ ಪೂರ್ವದಲ್ಲಿಯೇ ನನ್ನ ತಂದೆ ಚಾಸಾ-**11** ಹಾಗೂ ಊರಿನವರು ಸೇರಿ ಆರೋಪಿಯ ಮನೆಯ ಬಳಿ ಹೋಗಿ ವಿಚಾರಿಸಿದ್ದರು ಎನ್ನುವ ವಿಚಾರವನ್ನು ನನಗೆ ತಿಳಿಸಿದರು. ನಾನೂ ಸಹ ನನ್ನ ತಂಗಿಯನ್ನು ನಮ್ಮ ಊರಿನ ಅಕ್ಕಪಕ್ಕ ಹುಡುಕಿದೆ ಮತ್ತು ನನ್ನ ಮಾವ ಸೋಮಣ್ಣ ರವರಿಗೂ ಸಹ ನನ್ನ ತಂಗಿ ನಿಮ್ಮ ಊರಿಗೆ ಬಂದಿದ್ದಾಳಾ ಎಂದು ವಿಚಾರಿಸಿದೆ.

15. ಎರಡು ದಿನಗಳ ಕಾಲ ನನ್ನ ತಂಗಿ ಹುಡುಕಾಡಿದರೂ ಸಹ ಸಿಕ್ಕಿರಲಿಲ್ಲ. ನನ್ನ ತಂದೆ ನನ್ನ ತಂಗಿ ಕಾಣೆಯಾಗಿದ್ದ ಬಗ್ಗೆ ದೂರು ನೀಡಿದ್ದರು. ಪೊಲೀಸರು ಕಾಣೆಯಾದ ಎಂಟು ಗಂಟೆವರೆಗೂ ಯಾವುದೇ ಕ್ರಮ ತೆಗೆದುಕೊಳ್ಳಲಾಗುವುದಿಲ್ಲ ಎಂದು ಹೇಳಿದರು. ನನ್ನ ತಂದೆ ನನ್ನ ಎದುರು **2** ನೇ ಆರೋಪಿಗೆ ಕರೆ ಮಾಡಿ ದೂರು ಕೊಡಬೇಕು ನೀವು ಬನ್ನಿ ಎಂದು ಹೇಳಿದರು. ಆಗ **2** ನೇ ಆರೋಪಿ ತನ್ನ ಮಗ ವಿಷ ಕುಡಿದಿದ್ದಾನೆ ಬರಲು ಆಗುವುದಿಲ್ಲ ಎಂದು ಫೋನಿನಲ್ಲೇ ತಿಳಿಸಿದರು. ಆದ್ದರಿಂದ ನಾವೇ ಹೋಗಿ ದೂರು ಕೊಟ್ಟು ಬಂದೆವು. ಆ ರೀತಿ ದೂರು ಕೊಟ್ಟ ಎರಡು ದಿನಗಳ ನಂತರ ಪೊಲೀಸರು ಕರೆ ಮಾಡಿ ನಿಮ್ಮ ಬಾವ ನಿಮ್ಮ ತಂಗಿಯನ್ನು ಸಾಯಿಸಿದ್ದಾನೆ ಎಂದು ಹೇಳಿದರು. ಆಗ ನಾವು ನನ್ನ ತಂಗಿಯ ಶವವನ್ನು

ಹುಡುಕಿದೆವು. ನಾನು ನನ್ನ ತಂಗಿಯ ಶವವನ್ನು ಮೊದಲನೇ ಬಾರಿ ಕಾಲುವೆಯ ಒಳಗೆ ನೋಡಿದೆ. ಸದರಿ ಕಾಲುವೆ ಹಲಗೂರಿನ ಬಳಿ ಇತ್ತು. ನಾವು ಶವವನ್ನು ಕಾಲುವೆ ಉದ್ದಕ್ಕೂ ಹುಡುಕಿಕೊಂಡು ಹೋಗಿದ್ದೆವು. ಶವ ಸಿಕ್ಕ ನಂತರ ನಾನು ಪೊಲೀಸರಿಗೆ ಕರೆ ಮಾಡಿ ಶವ ಸಿಕ್ಕಿದೆ ಎಂದು ಹೇಳಿದೆ.

16. ನಂತರ ಪೊಲೀಸರು ಸ್ಥಳಕ್ಕೆ ಬಂದು ಶವವನ್ನು ಕಾಲುವೆಯಿಂದ ತೆಗೆದರು. ಪುನಃ ಸಾಕ್ಷಿ ಸದರಿ ಜಾಗಕ್ಕೆ ಯಾರೂ ಹೋಗುತ್ತಿರಲಿಲ್ಲ, ಆದ್ದರಿಂದ ನಾನು ಮತ್ತು ನನ್ನ ತಂದೆ ಪೊಲೀಸರ ಎದುರು ನನ್ನ ತಂಗಿಯ ಶವವನ್ನು ಕಾಲುವೆಯಿಂದ ಹೊರಗಡೆ ತೆಗೆದೆವು. ನಂತರ ನನ್ನ ತಂಗಿಯ ಶವವನ್ನು ಪೊಲೀಸರು ಮಳವಳ್ಳಿಯ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ತೆಗೆದುಕೊಂಡು ಹೋದರು. ಮರಣೋತ್ತರ ಪರೀಕ್ಷೆ ಆದ ನಂತರ ನನ್ನ ತಂಗಿಯ ಶವವನ್ನು ನಮಗೆ ಹಸ್ತಾಂತರಿಸಿದರು. ನಂತರ ನಾವು ನನ್ನ ತಂಗಿಯ ಶವಸಂಸ್ಕಾರವನ್ನು ನಮ್ಮ ಊರಿನಲ್ಲಿ ಮಾಡಿದೆವು.

17. ನನ್ನ ತಂಗಿಯನ್ನು ಆರೋಪಿ ಕರೆದುಕೊಂಡು ಹೋಗಿ ಕಾಲುವೆಯಲ್ಲಿ ಮುಳುಗಿಸಿದರು ಎಂದು ಪೊಲೀಸರು ಹೇಳಿದರು. ನನ್ನ ತಂಗಿ ಅವರು ಹೇಳಿದ ಹಾಗೆ ಕೇಳುತ್ತಿಲ್ಲ ಮತ್ತು ದುಡ್ಡು ಕೊಟ್ಟಿಲ್ಲ ಎಂದು ಆರೋಪಿ ನನ್ನ ತಂಗಿಯನ್ನು ಕಾಲುವೆಯಲ್ಲಿ ಮುಳುಗಿಸಿ ಸಾಯಿಸಿರುತ್ತಾನೆ. ಈ ಪ್ರಕರಣದ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ಮೇಲೆ ಹೇಳಿದ ಎಲ್ಲಾ ವಿಚಾರವನ್ನು ಪೊಲೀಸರಿಗೆ ನಾನು ಹೇಳಿರುತ್ತೇನೆ. ಆರೋಪಿಯ ಚಿಕ್ಕಪ್ಪನ ಬಗ್ಗೆಯೂ ಸಹ ಪೊಲೀಸರ ಮುಂದೆ ಹೇಳಿರುತ್ತೇನೆ, ಆದರೆ ಪೊಲೀಸರು ಆ ಬಗ್ಗೆ ಬರೆದುಕೊಂಡಿರುವುದಿಲ್ಲ.

<u>ಪಾಟೀ ಸವಾಲುಃ 1 ಮತ್ತು 2ನೇ ಆರೋಪಿತರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದಃ</u>

ನಾನು ಕಳೆದ ಹತ್ತು ವರ್ಷಗಳಿಂದ ಕೆಲಸ ಮಾಡಿಕೊಂಡು ಬೆಂಗಳೂರಿನಲ್ಲಿ ವಾಸವಿದ್ದೇನೆ. ಮದುವೆಯ ಮಾತುಕತೆ ಆಗಿದ್ದ ಸಮಯದಲ್ಲಿ ಆರೋಪಿಯ ಮನೆಗೆ ನಾನು ಹೋಗಿದ್ದೆ. ಆರೋಪಿಯ ಊರಿಗೆ ನಾನು ಕೇವಲ ಒಂದೇ ಬಾರಿ ಹೋಗಿರುತ್ತೇನೆ. ಮದುವೆಯಾದ ನಂತರ ಆ ರೀತಿ ಹೋಗಿರುತ್ತೇನೆ. ನನ್ನ ಮನೆಯಲ್ಲಿ ನನ್ನ ಮಾತು ಕೇಳಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ. ಆರೋಪಿಯೊಂದಿಗೆ ನಾನು ಮದುವೆಯ

ಮಾತುಕತೆ ಖುದ್ದಾಗಿ ಮಾತನಾಡಿರುವುದಿಲ್ಲ. ನನ್ನ ತಂಗಿಯ ಮದುವೆಯ ಬಗ್ಗೆ ನನ್ನ ತಂದೆ ತಾಯಿ ನನ್ನನ್ನು ಕೇಳಿ ತೀರ್ಮಾನ ತೆಗೆದುಕೊಂಡಿಲ್ಲ. ನನ್ನ ತಂಗಿಯ ಮದುವೆ ಆದ ನಂತರ ನನ್ನ ತಂಗಿ ನಾನು ವಾಸಮಾಡಿಕೊಂಡಿರುವ ಬೆಂಗಳೂರಿನ ಮನೆಗೆ ಬಂದಿರುವುದಿಲ್ಲ.

2. ನನ್ನ ತಂಗಿ ಹಾಗೂ 1ನೇ ಆರೋಪಿ ನಮ್ಮ ಊರಿಗೆ ಹಬ್ಬಕ್ಕೆ ಬಂದಾಗ ಆ ಸಂದರ್ಭದಲ್ಲಿ ನಾನು ಊರಿಗೆ ಬಂದಾಗ ನಾನು ನನ್ನ ತಂಗಿಯ ಜೊತೆ ಮಾತನಾಡಿರುತ್ತೇನೆ. ನಾನು ಖುದ್ದಾಗಿ 1ನೇ ಆರೋಪಿ ಜೊತೆ ಅವರ ಕಷ್ಟ ಸುಖದ ಬಗ್ಗೆ ಎಂದೂ ಮಾತನಾಡಿರುವುದಿಲ್ಲ. 1ನೇ ಆರೋಪಿ ಹಾಗೂ ನನ್ನ ತಂಗಿ ಒಟ್ಟಿಗೆ ಎಂದೂ ಅವರ ಸಂಸಾರ ವಿಚಾರವನ್ನು ಮಾತನಾಡಿರುವುದಿಲ್ಲ. ನನ್ನ ಎದುರು ಅಥವಾ ನನ್ನ ಜೊತೆ ಎಂದೂ 1ನೇ ಆರೋಪಿ ಹಣದ ವಿಚಾರ ಮಾತನಾಡಿರುವುದಿಲ್ಲ. ನನ್ನ ತಂದೆ ತಾಯಿ ನನ್ನ ಸಮಕ್ಷಮ ಎಂದೂ ಆರೋಪಿತರಿಗೆ ಹಣ ನೀಡಿಲ್ಲ. ನಾನು 1ನೇ ಆರೋಪಿ ಜೊತೆ ಮದುವೆ ಆದ ನಂತರ ಒಂದೇ ಬಾರಿ ಫೋನಿನಲ್ಲಿ ಮಾತನಾಡಿರುತ್ತೇನೆ.

3. ಮದುವೆಯಾದ ನಂತರ 1ನೇ ಆರೋಪಿ ಎಂದೂ ನಾನು ವಾಸಮಾಡಿಕೊಂಡಿರುವ ಬೆಂಗಳೂರಿಗೆ ಬಂದಿಲ್ಲ. ನಾನೂ ಸಹ 1ನೇ ಆರೊಪಿಗೆ ಬೆಂಗಳೂರಿಗೆ ಬರಲು ಹೇಳಿರಲಿಲ್ಲ. ನಾನು 1ನೇ ಆರೋಪಿಯ ಚಿಕ್ಕಪ್ಪನ ಜೊತೆ ಮಾತನಾಡಿದಾಗ 1ನೇ ಆರೋಪಿ ಇರಲಿಲ್ಲ. 1ನೇ ಆರೋಪಿಯ ಚಿಕ್ಕಪ್ಪ ಎಂದೂ ನನ್ನ ಸಮಕ್ಷಮ ಆರೋಪಿತರ ಜೊತೆ ಮಾತನಾಡಿರುವುದಿಲ್ಲ. 1ನೇ ಆರೋಪಿಯ ಚಿಕ್ಕಪ್ಪನನ್ನು ಮದುವೆಯಲ್ಲಿ ನೋಡಿರುವುದು ಬಿಟ್ಟರೆ ಎಂದೂ ನೋಡಿಲ್ಲ. 1ನೇ ಆರೋಪಿಯ ಚಿಕ್ಕಪ್ಪನ ಜೊತೆ ನಾನು ಎಂದೂ ಭೇಟಿ ಮಾಡಿ ಆರೋಪಿ ಹಾಗೂ ನನ್ನ ತಂಗಿಯ ವಿಚಾರ ಮಾತನಾಡಿರುವುದಿಲ್ಲ. 1ನೇ ಆರೋಪಿಯ ಚಿಕ್ಕಪ್ಪನ ಮೊಬೈಲ್ ನಂಬರ್ ನನಗೆ ನೆನಪಿಲ್ಲ.

4. ನನ್ನ ತಂಗಿ ಮದುವೆಯಾದ ಎಷ್ಟು ದಿನಗಳ ನಂತರ ನನ್ನ ತಂಗಿ ಗಾರ್ಮೆಂಟ್ಸ್ ಗೆ ಸೇರಿದ್ದಳು ಮತ್ತು ಸದರಿ ಗಾರ್ಮೆಂಟ್ಸ್ ನ ಹೆಸರು ಗೊತ್ತಿಲ್ಲ. ನನ್ನ ತಂಗಿ ಬಿ.ಎ. ಓದುತ್ತಿದ್ದಳು, ಎರಡನೇ ವರ್ಷದಲ್ಲಿ ಆಕೆಯ ಮದುವೆ ಆಗಿರುತ್ತದೆ. ನನ್ನ ತಂಗಿ ಬಿ.ಎ. ಎರಡನೆ ವರ್ಷದ ಪರೀಕ್ಷೆಯನ್ನು ಮದುವೆಯಾದ ನಂತರ ಅಥವಾ ಮೊದಲೇ ಬರೆದಿದ್ದಳು ಎನ್ನುವುದು ನನಗೆ ನೆನಪಿಲ್ಲ. ನನ್ನ ತಂಗಿಯ ಮದುವೆಯ ಪೂರ್ವದಲ್ಲಿ ನನ್ನ ತಂಗಿಯ

ವಿದ್ಯಾಭ್ಯಾಸದ ಖರ್ಚನ್ನು ನಾನೇ ನೋಡಿಕೊಳ್ಳುತ್ತಿದ್ದೆ. ನನ್ನ ತಂಗಿ ಎರಡು ವರ್ಷಕೊಳ್ಳೇಗಾಲದಲ್ಲಿ ಓದಿರುತ್ತಾಳೆ. ಆ ಸಮಯದಲ್ಲಿ ನಾನು ಒಂದು ಬಾರಿ ಹೋಗಿದ್ದೆ.

5. ನನ್ನ ತಂಗಿಯ ಮದುವೆಯಾದ ನಂತರ ಆಕೆ ಯಾವುದೇ ಪರೀಕ್ಷೆ ಕಟ್ಟಿರಲಿಲ್ಲ ಮತ್ತು ಓದುತ್ತಿರಲಿಲ್ಲ. **2**ನೇ ಆರೋಪಿ ನನ್ನ ತಂಗಿಯನ್ನು ಕಂಪ್ಯೂಟರ್ ಕ್ಲಾಸಿಗೆ ಸೇರಿಸಿದ್ದರು. ಕಂಪ್ಯೂಟರ್ ಸೆಂಟರ್ ಹೆಸರು ನನಗೆ ಗೊತಿತಲ್ಲ. ನನ್ನ ತಂಗಿ ಸಾಯುವ ಪೂರ್ವದಲ್ಲಿ ನಾನು ಆಕೆಯ ಕಂಪ್ಯೂಟರ್ ಸೆಂಟರಿಗೆ ಹೋಗಿರುವುದಿಲ್ಲ. ಆಕೆಯ ಕಂಪ್ಯೂಟರ್ ಸೆಂಟರ್ ಅಥವಾ ಗಾರ್ಮೆಂಟ್ಸ್ ಗೆ ಹೋಗುತ್ತಿದ್ದ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನನ್ನ ತಂಗಿ ಸತ್ತ ನಂತರ ಪೊಲೀಸರು ಆಕೆ ಕಂಪ್ಯೂಟರ್ ಸೆಂಟರ್ ನಲ್ಲಿ ಓದುತ್ತಿದ್ದಳು ಎನ್ನುವ ಬಗ್ಗೆ ದಾಖಲಾತಿ ತೆಗೆದುಕೊಂಡು ಬನ್ನಿ ಎಂದು ಹೇಳಿದರು. ಅದ್ದರಿಂದ ನಾನು ಮತ್ತು ನನ್ನ ಚಿಕ್ಕಪ್ಪ ಹೋಗಿ ಸದರಿ ದಾಖಲೆ ತಂದು ನೀಡಿದ್ದೆವು.

6. ನನ್ನ ತಾಯಿ **1**ನೇ ಆರೋಪಿ ಜೊತೆ ಮದುವೆಯಾದ ನಂತರ ನನ್ನ ಎದುರು ಪ್ರಾರಂಭದಲ್ಲಿ ಮಾತನಾಡಿದ್ದಾರೆ ನಂತರ ನನ್ನ ಎದುರು ಎಂದೂ ಮಾತನಾಡಿರುವುದಿಲ್ಲ. **1**ನೇ ಆರೋಪಿ ನಮ್ಮ ಊರಿಗೆ ಬರುತ್ತಿರಲಿಲ್ಲ. ನಾನು ನಮ್ಮ ಊರಿನಲ್ಲಿದ್ದಾಗ **1**ನೇ ಆರೋಪಿ ಕೇವಲ ಒಂದೇ ಬಾರಿ ಊರಿಗೆ ಬಂದಿರುತ್ತಾರೆ. ನನ್ನ ತಂಗಿಯ ಬಳಿ ಯಾಕೆ ಬಾವ ಬರುತ್ತಿಲ್ಲ ಎಂದು ಕೇಳಿರುವುದಿಲ್ಲ. ನನ್ನ ತಂಗಿ ಮದುವೆಯಾದ ನಂತರ ಹಬ್ಬ ಹರಿದಿನಗಳಲ್ಲಿ ನಮ್ಮ ಮನೆಗೆ ಬರುತ್ತಿದ್ದಳು, ಆರೋಪಿತರ ಮನೆಯಲ್ಲಿಯೇ ಹೆಚ್ಚು ಇರುತ್ತಿದ್ದಳು.

7. ನನ್ನ ತಂದೆ ಮತ್ತು **1**ನೇ ಆರೋಪಿ ಮಧ್ಯೆ ಏನು ಮಾತುಕತೆ ನಡೆಯುತ್ತಿತ್ತು ಎನ್ನುವ ಬಗ್ಗೆ ನನಗೆ ಖುದ್ದು ಗೊತ್ತಿರುವುದಿಲ್ಲ. ನನ್ನ ತಂದೆ ಹೇಳಿದ ಪ್ರಕಾರ **2**ನೇ ಆರೋಪಿಯೇ ನನ್ನ ತಂಗಿಯನ್ನು ಊರಿಗೆ ಕರೆದುಕೊಂಡು ಬಂದು ವಾಪಸ್ಸು ಕರೆದುಕೊಂಡು ಹೋಗುತ್ತಿದ್ದರು. ಆ ರೀತಿ ಹಬ್ಬ ಸಂದರ್ಭದಲ್ಲಿ ಬಿಟ್ಟರೆ ಬೇರೆ ಯಾವಾಗ ಕರೆದುಕೊಂಡು ಬರುತ್ತಿದ್ದರು ಎಂದು ನಿಖರವಾಗಿ ನಾನು ಕರೆ ಮಾಡಿ ಕೇಳಿರುವುದಿಲ್ಲ. ನನ್ನ ತಂದೆ ಹೇಳಿದ್ದರಿಂದ ನನ್ನ ತಂಗಿ ಹಾಗೂ **1**ನೇ ಆರೋಪಿಯ ವಿಚಾರ ಗೊತ್ತು, ಆದರೆ ಖುದ್ದಾಗಿ ಗೊತ್ತಿರುವುದಿಲ್ಲ.

8. ನಾನು ನನ್ನ ತಾಯಿಗೆ ಎರಡು ಬಾರಿ ಹಣ ಕೊಟ್ಟಿದ್ದ ಬಗ್ಗೆ ಯಾವಾಗ ಯಾವ ದಿನಾಂಕದಂದು ನೀಡಿದೆ ಎಂದು ನೆನಪಿಲ್ಲ. ನನ್ನ ತಾಯಿ **1**ನೇ ಆರೋಪಗೆ ಹಣ ಕೊಟ್ಟಿದ್ದೆ ಎಂದು ಹೇಳಿದ್ದರಿಂದ ನನಗೆ ಗೊತ್ತು. ನನ್ನ ತಂಗಿಗೆ ಆರೋಪಿತರು ಚಿತ್ರಹಿಂಸೆ ಮಾಡುತ್ತಿದ್ದರು ಎನ್ನುವ ವಿಚಾರ ನನಗೆ ಖುದ್ದಾಗಿ ಗೊತ್ತಿರುವುದಿಲ್ಲ, ನನ್ನ ತಾಯಿ ನನಗೆ ಸ್ವಲ್ಪ ಹೇಳಿರುತ್ತಾರೆ. ನನ್ನ ತಂದೆ **80** ಸಾವಿರ ರೂಗಳನ್ನು ಆರೋಪಿಗೆ ನೀಡಿದಾಗ ನಾನು ಖುದ್ದಾಗಿ ಹಾಜರಿರಲಿಲ್ಲ.

9. ನನ್ನ ತಂಗಿ ಕಾಣೆಯಾಗಿದ್ದ ಯಾವ ತಾರೀಖು ಮತ್ತು ಯಾವ ತಿಂಗಳು ನಾನು ಆಕೆಯನ್ನು ಹುಡುಕಲು ಬಂದಿದೆ ಎಂದು ನೆನಪಿಲ್ಲ. ನನ್ನ ತಂಗಿ ಕಾಣೆಯಾಗಿದ್ದಾಗ ಸುಮಾರು ಇಪ್ಪತ್ತು ದಿನ ನಾನು ಊರಿನಲ್ಲಿದ್ದೆ. ನನ್ನ ತಂಗಿಯ ಶವ ಸಿಕ್ಕಿದ್ದ ತಾರೀಖು ನನಗೆ ನೆನಪಿಲ್ಲ. ಪೊಲೀಸರು ಇಂತ ಸ್ಥಳದಲ್ಲಿ ನನ್ನ ತಂಗಿಯ ಶವವನ್ನು ಮುಳುಗಿಸಿದ್ದಾರೆ ಎಂದು ಸ್ಥಳ ತೋರಿಸುವವರೆಗೂ ನನ್ನ ತಂಗಿಯ ಶವ ಎಲ್ಲಿದೆ ಎಂದು ನಮಗೆ ಗೊತ್ತಿರಲಿಲ್ಲ.

10. ನಾನು ನನ್ನ ತಂಗಿಯ ಶವವನ್ನು ಕಾಲುವೆಯಿಂದ ಹೊರತೆಗೆದಾಗ ಪೊಲಿಸರು ಇದ್ದರು. ಪೊಲೀಸರು ಹೇಳಿದ್ದರಿಂದ ನಾನು ನನ್ನ ತಂಗಿಯ ಶವವನ್ನು ಹೊರಗಡೆ ತೆಗೆದಿದ್ದೆ. ಪೊಲೀಸರು ನನ್ನ ತಂಗಿಯನ್ನು ಮುಳುಗಿಸಿದ್ದಾರೆ ಎಂದು ತೋರಿಸಿದ ಸ್ಥಳದಿಂದ ಶವ ಸಿಕ್ಕಿದ ಸ್ಥಳ ಸುಮಾರು ಎರಡು ಕಿಲೋ ಮೀಟರ್ ದೂರವಿರುತ್ತದೆ. ಸದರಿ ಸ್ಥಳ ಕುಂದೂರು ಬೆಟ್ಟದ ನಾಲೆಯ ಕಲ್ಲು ಮತ್ತು ಗಿಡಗಳ ಪೊದೆ ಮತ್ತು ಬಳ್ಳಿಗಳು ಬೆಳೆದುಕೊಂಡಿರುತ್ತವೆ ಎಂದರೆ ಸರಿ. ಮೊದಲು ಸದರಿ ಸ್ಥಳಕ್ಕೆ ನನ್ನ ತಂಗಿಯನ್ನು ಹುಡುಕಲು ಹೋಗಿರಲಿಲ್ಲ.

11. ನನ್ನ ತಂಗಿಯ ಸ್ನೇಹಿತರು ಯಾರು, ಅವರ ಹೆಸರು, ಯಾವ ಊರಿನವರು ಎಂದು ಗೊತ್ತಿಲ್ಲ. ಸದರಿಯವರ ಫೋನ್ ನಂಬರನ್ನು ಹೇಳಲು ಆಗುವುದಿಲ್ಲ. ನಾನು ಪೊಲೀಸರು ವಿಚಾರಣೆ ಮಾಡಿದಾಗ ನನ್ನ ತಂಗಿಯ ಸ್ನೇಹಿತರಿಗೆ ನಾನು ಕರೆ ಮಾಡಿದ ವಿಚಾರವನ್ನು ಹೇಳಿದೆ. ಶವ ಸಿಕ್ಕಿದ ಸ್ಥಳದಲ್ಲಿ ಪೊಲೀಸರು ನನ್ನನ್ನು ವಿಚಾರಣೆ

ಮಾಡಿರುವುದಿಲ್ಲ. ನನ್ನ ತಂಗಿಯ ಮದುವೆಯ ಸಂದರ್ಭದಲ್ಲಿ ವರದಕ್ಷಿಣೆಯಾಗಿ **80** ಸಾವಿರ ಹಣವನ್ನು ಆರೋಪಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ.

13. ನನ್ನ ತಂಗಿಯ ನಿಶ್ಚಿತಾರ್ಥ **1** ನೇ ಆರೋಪಿಯ ಜೊತೆ ಮದುವೆ ಆಗುವ ಮೊದಲೇ ಇನ್ನೊಬ್ಬ ಕಿರುಗಾವಲು ಹುಡುಗನ ಜೊತೆ ಆಗಿತ್ತು, ಆದರೆ ಸದರಿ ಹುಡುಗನ ಹೆಸರು ಗೊತ್ತಿಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಾರ್ಯಕಲಾಪದ ಅವಧಿ ಮುಗಿದಿದ್ದರಿಂದ ಮಧ್ಯಾಹ್ನದ ಕಾರ್ಯ ಕಲಾಪದ ಅವಧಿಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.

<u>ಮಧ್ಯಾಹ್ನದ ವೇಳೆಯಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದವರೆದ ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿತರ ಪರ ಶ್ರೀ ಎಂ.ಬಿ.ಆರ್. ವಕೀಲರಿಂದಃ</u>

14. ಕಿರುಗಾವಲಿನಲ್ಲಿ ನಮ್ಮ ಸಂಬಂಧಿಕರು ಇದ್ದಾರೆ ಎಂದರೆ ಸರಿ. ಅವರ ಹೆಸರು ಮಂಗಳಮ್ಮ, ಸದರಿಯವರು ನನ್ನ ತಾಯಿಯ ಸಂಬಂಧಿಕರು. ನಾನು ಐಟಿಐ ಮಾಡುವ ಸಂದರ್ಭದಲ್ಲಿ ಒಂದು ತಿಂಗಳು ಅವರ ಮನೆಯಲ್ಲಿದ್ದೆ. ನನ್ನ ತಂಗಿಗೆ ನಿಶ್ಚಿತಾರ್ಥ ವಾಗಿದ್ದ ಕಿರುಗಾವಲಿನ ಹುಡುಗನ ಪರಿಚಯ ನನಗೆ ಅಷ್ಟು ಇರಲಿಲ್ಲ. ಆತ ಪಿಯುಸಿ ಮಾಡಿ ಬೆಂಗಳೂರಿನ ಸ್ವಪ್ನ ಬುಕ್ ಹೌಸ್ ನಲ್ಲಿ ಕೆಲಸ ಮಾಡುತ್ತಿದ್ದ. ಸದರಿ ಆ ಹುಡುಗನ ಜೊತೆ

ಮದುವೆ ಮಾತುಕತೆ ಸಂದರ್ಭದಲ್ಲಿ ನಾನು ಹಾಜರಿದ್ದೆ. ಸದರಿ ಕಿರುಗಾವಲಿನ ಹುಡುಗನ ಮನೆಗೆ ನೋಡಲು ನಾವೂ ಸಹ ಹೋಗಿದ್ದೆವು.

15. ನಿಶ್ಚಿತಾರ್ಥ ನಮ್ಮ ಮನೆಯಲ್ಲೇ ಆಯಿತು. ಸದರಿ ನಿಶ್ಚಿತಾರ್ಥಕ್ಕೆ ಸುಮಾರು ಜನರು ಸೇರಿದ್ದರು. ಆಗ ನನ್ನ ತಂಗಿ **2** ನೇ ಪಿಯುಸಿ ಓದುತ್ತಿದ್ದಳು. ಕಿರುಗಾವಲು ಹುಡುಗನ ಜೊತೆ ನಿಶ್ಚಿತಾರ್ಥ ಆಗುವ ಪೂರ್ವದಿಂದಲೇ ನನ್ನ ತಂಗಿ ಮದುವೆ ಬೇಡ ಎಂದು ಹೇಳುತ್ತಿದ್ದಳು, ಆದರೆ ನನ್ನ ತಂದೆ ತಾಯಿ ನನ್ನ ತಂಗಿಯನ್ನು ಒಪ್ಪಿಸುತ್ತೇವೆ ಎಂದು ಹೇಳುತ್ತಿದ್ದರು. ನಿಶ್ಚಿತಾರ್ಥ ಆದ ನಂತರ ನನ್ನ ತಂಗಿ ಮದುವೆ ಬೇಡವೇ ಬೇಡ ಎಂದು ಊಟ ತಿಂಡಿಯನ್ನು ಬಿಟ್ಟಿದ್ದಳು, ಆಗ ಸದರಿ ಸಂಬಂಧ ಮುರಿದುಹೋಯಿತು.

16. ನಿಮ್ಮ ತಂಗಿ ಯಾಕೆ ಆ ಸಂಬಂಧ ಬೇಡ ಎಂದು ಹೇಳಿದಳು ಎಂದರೆ ಸಾಕ್ಷಿ ಆ ಹುಡುಗ ಸ್ವಲ್ಪ ಕುಳ್ಳು, ಜಾಸ್ತಿ ಓದಿಲ್ಲ, ಮನೆ ಕಡೆ ಅಷ್ಟರಲ್ಲೇ ಇದೆ ಎಂದು ಬೇಡ ಎಂದು ಹೇಳಿದಳು ಎಂದು ನುಡಿಯುತ್ತಾರೆ. ಸದರಿ ಆ ಹುಡುಗನ ಜೊತೆ ನಾನು ಮಾತನಾಡಿಲ್ಲ. ಆದರೆ ನಾನೇ ಸದರಿ ಹುಡುಗನಿಗೆ ಕರೆ ಮಾಡಿ ನನ್ನ ತಂಗಿ ಮದುವೆ ಬೇಡ ಎಂದು ಹೇಳುತ್ತಿದ್ದಾಳೆ ಎಂದು ವಿಚಾರ ತಿಳಿಸಿದೆ. ಸದರಿ ಹುಡುಗ ಸ್ವಪ್ನ ಬುಕ್ ಹೌಸ್ ನಲ್ಲಿ ಕೆಸಲ ಮಾಡುತ್ತಿದ್ದು, ಆತನಿಗೆ **12** ಸಾವಿರ ಹಣ ಸಂಬಳ ಬರುತ್ತಿದ್ದು, ಸದರಿ ವಿಚಾರವನ್ನು ನಾನೇ ಹೋಗಿ ವಿಚಾರಿಸಿದೆ. ಸದರಿ ಸಂಬಂಧ ಹುಡುಗನ ಕಡೆಯಿಂದ ಯಾವುದೇ ಸಮಸ್ಯೆ ಇರಲಿಲ್ಲ, ನಮ್ಮ ಕಡೆಯಿಂದಲೇ ಕಿತ್ತುಹಾಕಿದ್ದೆವು.

17. ಕಿರುಗಾವಲಿನ ಹುಡುಗನ ಜೊತೆ ನಿಶ್ಚಿತಾರ್ಥ ಆಗಿದ್ದ ಸಂದರ್ಭದಲ್ಲಿ ನನ್ನ ತಂಗಿ ಪಿಯುಸಿ ಯಲ್ಲಿ ಓದುತ್ತಿದ್ದಳು ಆದರೆ ಮೊದಲನೇ ವರ್ಷ ಅಥವಾ ಎರಡನೇ ವರ್ಷ ಎಂಬುದು ನಿಖರವಾಗಿ ಗೊತ್ತಿಲ್ಲ. ಆಕೆಗೆ ಮುಂದೆ ಓದಬೇಕು ಎಂಬ ಆಸೆ ಯಿತ್ತು, ಆದರೆ ನನ್ನ ತಂದೆ ಮದುವೆ ಮಾಡಿ ಮುಗಿಸಬೇಕು ಎಂಬುದು ಇತ್ತು. ಆಗ ನನ್ನ ತಂಗಿಗೆ **21** ವರ್ಷ ವಯಸ್ಸಾಗಿತ್ತು. ಕಿರುಗಾವಲಿನ ಹುಡುಗನ ಜೊತೆ ನಿಶ್ಚಿತಾರ್ಥ ಆಗಿದ್ದ ಮುರಿದಿದ್ದ ನಂತರವೂ ಸಹ ನನ್ನ ತಂಗಿ ಕೊಳ್ಳೇಗಾಲದಲ್ಲಿ ಓದುತ್ತಿದ್ದಳು. ನಿಶ್ಚಿತಾರ್ಥ ಆಗಿದ್ದ **2-3** ದಿನಗಳಲ್ಲೇ ಸದರಿ ಸಂಬಂಧ ಕಿತ್ತುಹೋಗಿತ್ತು.

18. 1ನೇ ಆರೋಪಿ ಬಿ.ಕಾಂ. ವಿದ್ಯಾಭ್ಯಾಸ ಮಾಡಿದ್ದಾನೆ ಎಂದು ಊರಿನಲ್ಲಿ ಸಂಬಂಧಿಕರು ಮತ್ತು ಊರಿನವರು ಹೇಳಿದ್ದರು. ನಾನು ಖುದ್ದಾಗಿ 1ನೇ ಆರೋಪಿಯ ವಿದ್ಯಾಭ್ಯಾಸವನ್ನು ವಿಚಾರಿಸಿರುವುದಿಲ್ಲ. 1ನೇ ಆರೋಪಿ ಏನು ಕೆಲಸ ಮಾಡುತ್ತಿದ್ದಾನೆ, ಅವನಿಗೆ ಎಷ್ಟು ಆದಾಯವಿದೆ ಎಂದು ನಾನು ಖುದ್ದಾಗಿ ಹೋಗಿ ವಿಚಾರಿಸಿರುವುದಿಲ್ಲ. 1ನೇ ಆರೋಪಿತರ ಕುಟುಂಬದಲ್ಲಿ ಎಷ್ಟು ಜಮೀನಿದೆ ಎಷ್ಟು ಆದಾಯವಿದೆ ಎಂದು ವಿಚಾರಿಸಿರುವುದಿಲ್ಲ.

19. ನನ್ನ ತಂಗಿಯ ಮದುವೆ 1ನೇ ಆರೋಪಿ ಜೊತೆ ಆಗಿದ್ದ ವಿಚಾರದಲ್ಲಿ ನನ್ನ ಯಾವುದೇ ಪಾತ್ರ ಇರುವುದಿಲ್ಲ, ನನ್ನ ತಂಗಿ ಒಪ್ಪಿದ್ದರಿಂದ ನಾನು ಸುಮ್ಮನಾದೆ, ನನ್ನ ತಂಗಿಗೆ ಮದುವೆ ಒಪ್ಪಿಗೆಯಿದೆಯೇ ಎಂದು ನಾನು ಕೇಳಿದ್ದೆ. ನನ್ನ ತಂಗಿಯ ಮೊದಲ ನಿಶ್ಚಿತಾರ್ಥ ಮುರಿದ ಒಂದು ವರ್ಷದ ನಂತರ 1ನೇ ಆರೋಪಿಯ ಮನೆಯವರು ಮದುವೆ ಮಾತುಕತೆ ಆಡಲು ಬಂದಿದ್ದರು. ನನ್ನ ತಂಗಿಗೆ ಆಗಲೇ ಬಿ.ಕಾಂ. ಗೆ ಸೇರಿಸಿದ್ದರು ಮತ್ತು ಹಾಸ್ಟೆಲಿಗೆ ಎಮರ್ಜೆನ್ಸಿಗೆ ಬಸ್ ಸಿಗಲಿಲ್ಲ ಎಂದರೆ ಇರಲಿ ಎಂದು ಸೇರಿಸಿದ್ದೆವು. ಸರ್ಕಾರಿ ಹಾಸ್ಟೆಲ್ ಗೆ ನಮ್ಮ ಚಿಕ್ಕಪ್ಪ ಮಹದೇವಸ್ವಾಮಿ ಸೇರಿಸಿದ್ದರು. ನನ್ನ ತಂಗಿ ಹಾಸ್ಟೆಲ್ ನಲ್ಲಿದ್ದಾಗ ನಾನು ಎಂದೂ ಹಾಸ್ಟೆಲ್ ಬಳಿ ಹೋಗಿರುವುದಿಲ್ಲ. ನನ್ನ ತಂಗಿ ಹಾಸ್ಟೆಲ್ ನಲ್ಲಿ ಒಂದು ಅಥವಾ ಎರಡು ತಿಂಗಳು ಇದ್ದಳು.

20. ನನ್ನ ತಂಗಿ 2ನೇ ಪಿಯುಸಿ ಯಲ್ಲಿ ಫೇಲಾಗಿದ್ದಳು, ಆಗ ನಾನು ನನ್ನ ತಂಗಿಗೆ ಫೋನಿನಲ್ಲಿ ಬೈದಿದ್ದೆ. ಮೊದಲನೇ ನಿಶ್ಚಿತಾರ್ಥ ಮುರಿದಿದ್ದ ನಂತರ ನನ್ನ ತಂಗಿ ಪಿಯುಸಿ ಯಲ್ಲಿ ಫೇಲಾಗಿದ್ದಳು. ನನ್ನ ತಂಗಿ ಫೇಲಾಗಿದ್ದ ವಿಚಾರವನ್ನು ನಾನು ಚೆಕ್ ಮಾಡಿದಾಗ ಗೊತ್ತಾಗಿರುತ್ತದೆ. ಆಕೆ ಯಾವ ವಿಷಯದಲ್ಲಿ ಫೇಲಾಗಿದ್ದಳು ಎಂದು ನನಗೆ ಗೊತ್ತಿಲ್ಲ.

21. ನನ್ನ ತಂಗಿ ಮದುವೆಯಾದ ನಂತರ ಆಷಾಢ ಸಂದರ್ಭದಲ್ಲಿ ಎಷ್ಟು ದಿನ ನಮ್ಮ ಮನೆಯಲ್ಲಿದ್ದಳು ಎಂದು ನನಗೆ ಗೊತ್ತಿಲ್ಲ. ನನ್ನ ತಂಗಿ ಫೈನಲ್ ಇಯರ್ ಬಿ.ಎ. ಗೆ ಮದುವೆಯಾದ ನಂತರ ಪರೀಕ್ಷೆ ಕಟ್ಟಿದ್ದಳು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂಗಿ ಹಾಗೂ 1ನೇ ಆರೋಪಿ ಎಷ್ಟು ಸಮಯದವರೆಗೆ ಪರಸ್ಪರ ಅನ್ಯೋನ್ಯವಾಗಿದ್ದರು ಎಂಬುದು ನನಗೆ ಗೊತ್ತಿಲ್ಲ.

22. 1ನೇ ಆರೋಪಿ ಎಂದೂ ನನ್ನ ಎದುರು ನನ್ನ ತಂಗಿಗೆ ಬೈದಿರುವುದಿಲ್ಲ ಅಥವಾ ಕೊಚ್ಚಾಕುತ್ತೇನೆ ಎಂದು ಹೇಳಿರುವುದಿಲ್ಲ. ನನ್ನ ತಂಗಿ ಹೇಳಿದ್ದರಿಂದ ನನಗೆ ಗೊತ್ತು. ನನ್ನ ತಂಗಿ ಮದುವೆಯ ಪೂರ್ವದಲ್ಲಿ 1ನೇ ಆರೋಪಿ ಜೊತೆ ಪರಸ್ಪರ ಭೇಟಿ ಮಾಡಿ ಮಾತನಾಡಿರುವುದಿಲ್ಲ. ನನ್ನ ತಂಗಿಗೆ 1ನೇ ಆರೋಪಿ ಜೊತೆ ಮದುವೆ ಇಷ್ಟವಿರಲಿಲ್ಲ ಮತ್ತು ಒತ್ತಾಯ ಪೂರ್ವಕವಾಗಿ ಆಕೆಯ ಮದುವೆಯನ್ನು 1ನೇ ಆರೋಪಿ ಜೊತೆ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ತಮ್ಮ ಸ್ವಇಚ್ಛೆಯಿಂದ ಮೊದಲನೆಯದಾಗಿ 1ನೇ ಆರೋಪಿಯ ಜೊತೆ ನನ್ನ ತಂಗಿಯ ಮದುವೆ ಮಾಡುವುದು ನನಗೇ ಇಷ್ಟವಿರಲಿಲ್ಲ. ನನ್ನ ಮಾತು ಮೀರಿ ನನ್ನ ತಂದೆ ತಾಯಿ ನನ್ನ ತಂಗಿಯ ಮದುವೆ ಮಾಡಿದ್ದರು.

23. ನನ್ನ ತಂಗಿಗೆ ಮದುವೆಯಾದ ನಂತರ ಓದು ಎಂದು ನಾನು ಹೇಳಿರುವುದಿಲ್ಲ. ನನ್ನ ತಂಗಿ ಮದುವೆ ಆದ ನಂತರವೂ ಸಹ ಓದಬೇಕು ಎಂದು ನನ್ನ ಎದುರು ಹೇಳಿರುವುದಿಲ್ಲ, ನನ್ನ ತಂದೆ ತಾಯಿ ಜೊತೆ ಹೇಳಿದ್ದಳೋ, ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಂಗಿಗೆ ಇಷ್ಟವಿರಲಿಲ್ಲದ ಮದುವೆ ಮಾಡಿದ್ದರಿಂದ 1ನೇ ಆರೋಪಿ ಜೊತೆ ಸರಿಯಾಗಿ ಬಾಳುವೆ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನನ್ನ ತಂದೆ ಹದಿನೈದು ದಿನಕೊಮ್ಮೆ ನನ್ನತಂಗಿಯನ್ನು ನಮ್ಮ ಮನೆಗೆ ಕರೆದುಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳಿ ಪುನಃ ಹಬ್ಬದ ಸಂದರ್ಭದಲ್ಲಿ ಕರೆದುಕೊಂಡು ಬರುತ್ತಿದ್ದರು ಎಂದು ನುಡಿಯುತ್ತಾರೆ. ಗಂಡ ಹೆಂಡತಿ ಅನ್ಯೋನ್ಯವಾಗಿಲ್ಲ ಎನ್ನುವ ದೃಷ್ಠಿಯಿಂದ ಅವರ ಮನೆಗೆ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ನನಗೆ ರಜೆ ಸಿಗುತ್ತಿರಲಿಲ್ಲ ಎಂದು ನುಡಿಯುತ್ತಾರೆ.

24. ನನ್ನ ತಂಗಿ ಒಬ್ಬಳೇ ಕೊಳ್ಳೇಗಾಲ, ಬೆಂಗಳೂರು, ಕೆ.ಎಂ ದೊಡ್ಡಿ ಊರುಗಳಿಗೆಲ್ಲಾ ಹೋಗಿ ಬರುತ್ತಿದ್ದಳು ಎಂದರೆ ಸರಿ. ಅದೇ ರೀತಿ ಆಕೆ ಒಬ್ಬಳೇ ದೇವಸ್ಥಾನಕ್ಕೆಲ್ಲಾ ಸುತ್ತಾಡುತ್ತಿದ್ದಳು ಎಂದರೆ ಸರಿ. ನನ್ನ ತಂಗಿಗೆ ತಾನು ಚೆನ್ನಾಗಿರಬೇಕು ಎಂಬ ಆಸೆ ಇತ್ತು ಎಂದರೆ ಸರಿ. ಕೋವಿಡ್ ಆಗಿದ್ದ ಸಮಯದಲ್ಲಿ ನನ್ನ ತಂಗಿ ಆರೋಪಿತರ ಮನೆಯಲ್ಲಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿ ಮತ್ತು 1ನೇ ಆರೋಪಿಯೊಂದಿಗೆ ಯಾವುದೇ ದೈಹಿಕ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ಆಕೆಯ ಸಾವಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆಕೆಗೆ ಅವಳ ಇಷ್ಟದ ವಿರುದ್ಧವಾಗಿ

ಮದುವೆ ಮಾಡಿದ್ದ ಕಾರಣ ಆಕೆ ಖಿನ್ನತೆಗೆ ಒಳಗಾಗಿದ್ದಳು ಎಂದರೆ ಸರಿಯಲ್ಲ. ನನ್ನ ತಂಗಿಗೆ 1 ನೇ ಆರೋಪಿಯ ಮನೆಯಲ್ಲಿರಲು ಅಥವಾ ಊರಿನಲ್ಲಿ ಬಾಳಲು ಯಾವುದೇ ತೊಂದರೆ ಇರಲಿಲ್ಲ ಎನ್ನುವ ಸೂಚನೆಗೆ ಸಾಕ್ಷಿ ತೊಂದರೆ ಇಲ್ಲದಿದ್ದರಿಂದ ಆಕೆ ಅಲ್ಲಿದ್ದಳು ಎಂದು ನುಡಿಯುತ್ತಾರೆ.

25. ಈ ಪ್ರಕರಣಕ್ಕೆ ಸಂಬಂಧಪಟ್ಟ ದೋಷಾರೋಪಣಾ ಪಟ್ಟಿಯನ್ನು ನಾವು ಪಡೆದುಕೊಂಡಿರುತ್ತೇವೆ. ನಾನು ಹೇಳಿದ ಪ್ರಕಾರ ಪೊಲೀಸರು ಬರೆದುಕೊಂಡಿರುತ್ತಾರೆ. ಪೊಲೀಸರ ಮುಂದೆ ಹೇಳಿಕೆ ಕೊಡುವಾಗ ಮದುವೆಯಾದ **4-5** ತಿಂಗಳು ಚೆನ್ನಾಗಿದ್ದರು ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ಹೇಳಿಕೆ ನೀಡಿರುತ್ತೇನೆ. ಶಿವರಾಜು ಎಂಬುವವರು ಯಾರು ಎಂದು ನಾನು ನೋಡಿರುವುದಿಲ್ಲ. ನನ್ನ ತಾಯಿ ನನಗೆ 1 ನೇ ಆರೋಪಿ ಹಣ ಕೇಳುತ್ತಿದ್ದಾನೆ ಎಂದು ಹೇಳಿದಾಗ ನನ್ನ ಬಳಿ ಹಣವಿಲ್ಲ ಕೊಡಲು ಆಗುವುದಿಲ್ಲ ಎಂದು ಪೊಲೀಸರ ಮುಂದೆ ನಾನು ಹೇಳಿರುತ್ತೇನೆ.

26. 1 ನೇ ಆರೋಪಿಯ ಚಿಕ್ಕಪ್ಪನಿಗೆ ಓದಿರುವ ಹುಡುಗಿಗೆ ಯಾಕೆ ಗಾರ್ಮೆಂಟ್ಸ್ ಗೆ ಸೇರಿಸಿದ್ದೀರಾ ಎಂದು ಕೇಳಿದೆ, ನಂತರ ಕೆಲಸ ಬಿಡಿಸಿದರು ಎಂದೂ ಸಹ ನಾನು ಹೇಳಿದೆ. ನಂತರ ಕಂಪ್ಯೂಟರ್ ಕ್ಲಾಸಿಗೆ ಸೇರಿಸಿದರು ಎನ್ನುವ ವಿಚಾರವನ್ನೂ ಸಹ ಪೊಲೀಸರ ಮುಂದೆ ಹೇಳಿರುತ್ತೇನೆ. 1 ನೇ ಆರೋಪಿಯ ಚಿಕ್ಕಪ್ಪನ ಜೊತೆ **3-4** ಬಾರಿ ಫೋನಿನಲ್ಲಿ ಮಾತನಾಡಿರುವ ವಿಚಾರವನ್ನು ಪೊಲೀಸರಿಗೆ ಹೇಳಿದ್ದೆ.

27. ನನ್ನ ತಂಗಿ ಕಾಣೆಯಾಗುವ ಹಿಂದಿನ ದಿನ ಆರೋಪಿ ಕಂಪ್ಯೂಟರ್ ಕ್ಲಾಸ್ ಬಳಿ ಬಂದು ಆಕೆಯನ್ನು ಬೈಕ್ ನಲ್ಲಿ ಕೂರಿಸಿಕೊಂಡು ಹೋಗಿ ವಾಹನ ಕೆಟ್ಟಿದೆ ಎಂದು ಆಕೆಯನ್ನು ಕಂಪ್ಯೂಟರ್ ಕ್ಲಾಸ್ ಬಳಿ ಕರೆದುಕೊಂಡು ಹೋಗಿ ಬಿಟ್ಟಿದ್ದ ಎನ್ನುವ ವಿಚಾರವನ್ನು ನನ್ನ ತಂಗಿ ಅದೇ ದಿನ ರಾತ್ರಿ ನನಗೆ ಕರೆ ಮಾಡಿ ಹೇಳಿದ್ದಳು. ಈಗ ಓದಿ ಹೇಳಿದ ಪ್ರಕಾರ ಅಂದರೆ 'ದಿನಾಂಕ:**16.11.2021** ರಂದು ನಾನು ಬೆಂಗಳೂರಿನಲ್ಲಿದ್ದೆ ನನ್ನ ತಂದೆ ನನಗೆ ಕರೆ ಮಾಡಿ ---------- ಸ್ವಿಚ್ ಆಫ್ ಆಗಿದೆ ಎಂದು ಹೇಳಿದರು.' ಎಂದು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಸದರಿ ಹೇಳಿಕೆಯ

ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು. ನನ್ನ ತಂಗಿ ನನಗೆ ಕರೆ ಮಾಡಿ ಆದೇ ದಿನ ವಿಷಯ ಹೇಳಿದಳು.

28. ನನ್ನ ತಂಗಿ ಕಾಣೆಯಾದ ಬಗ್ಗೆ ದೂರು ಕೊಡಲು ಹೋದಾಗ ನಾನೂ ಸಹ ಹೋಗಿದ್ದೆ. ನನ್ನ ತಂಗಿಯ ಶವ ಮೊಟ್ಟಮೊದಲನೆಯದಾಗಿ ನನಗೆ ಸಿಕ್ಕಿತ್ತು. ಪೊಲೀಸರಿಗೆ ಸಿಕ್ಕಿರಲಿಲ್ಲ. ನಾನು ಪೊಲೀಸರ ಮುಂದೆ ಕಾಲುವೆ ನೀರಿನಲ್ಲಿ ಪೊಲೀಸರು ಶವ ಸಿಕ್ಕಿದೆ ಬಂದು ನೋಡಿ ಎಂದು ವಿಚಾರ ತಿಳಿಸಿದರು ಎಂದೂ ಸಹ ಹೇಳಿರುವುದಿಲ್ಲ. ಸದರಿ ಹೇಳಿಕೆಯನ್ನು ಅಂದರೆ ' ಕುಂದೂರು ಶಾಖೆ ಕಾಲುವೆ ನೀರಿನಲ್ಲಿ ---------- ವಿಚಾರ ಗೊತ್ತಾಯಿತು. ಎಂದು ಹೇಳಿರುವುದಿಲ್ಲ. ಸದರಿ ಹೇಳಿಕೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಆರೋಪಿತರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂಗಿಯ ಸಾವಿಗೂ, ಆರೋಪಿತರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.